**CC 10/2018**
**PW.10**

**ಅಪರ ಸಿವಿಲ್ ನ್ಯಾಯಾಧೀಶರು ಮತ್ತು ಜೆ ಎಂ ಎಫ್ ಸಿ ನ್ಯಾಯಾಲಯ,**
**ದೊಡ್ಡಬಳ್ಳಾಪುರ**
**ಸಿ ಸಿ ನಂ :10/2018**

**ಪಿ ಡಬ್ಲ್ಯೂ - 10**

**ಸಿ ಡಬ್ಲ್ಯೂ - 12**

**ದಿಃ 20.01.2026 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.**

**ಹೆಸರು ಃ ಗೋವಿಂದರಾಜು**

**ತಂದೆಯ ಹೆಸರು ಃ ಲಕ್ಷ್ಮಣ**

**ವಯಸ್ಸು ಃ 62 ವರ್ಷ**

**ಉದ್ಯೋಗ ಃ ನಿವೃತ್ತ ಅಗ್ನಿಶಾಮಕ ಅಧಿಕಾರಿ**

**ವಿಳಾಸ ಃ ಬಿಳಿಜಾಜಿ, ಹೆಸರಘಟ್ಟ ಹೋಬಳಿ**

**ಮುಖ್ಯ ವಿಚಾರಣೆ ಃ ಸ ಸ ಅ ರವರಿಂದ**

ನಾನು 2014 ರಿಂದ 2024 ರವರೆಗೂ ದೊಡ್ಡಬಳ್ಳಾಪುರ ಅಗ್ನಿಶಾಮಕ ಠಾಣೆಯಲ್ಲಿ ಅಗ್ನಿ ಶಾಮಕ ಠಾಣಾಧಿಕಾರಿಯಾಗಿ ಕರ್ತವ್ಯನಿರ್ವಹಿಸಿರುತ್ತೇನೆ.

ದಿಃ 05.03.2017 ರಂದು ನನಗೆ ದೊಡ್ಡಬೆಳವಂಗಲ ಪೋಲೀಸ್ ಠಾಣೆಯಿಂದ ಚಿಕ್ಕಬೆಳವಂಗಲದಲ್ಲಿ ಗ್ಯಾಸ್ ಲೀಕೇಜ್ ಆಗಿ ಮನೆ ಕುಸಿದಿದ್ದು ಅದರಡಿ ಸಿಲಿಂಡರ್ ಗಳು ಸಿಲುಕಿಕೊಂಡಿದ್ದು ಅವುಗಳನ್ನು ತೆಗೆದುಕೊಡುವಂತೆ ಕರೆ ಬಂದಿತ್ತು. ನಂತರ ನಾನು ಹಾಗೂ ಸಿಬ್ಬಂಧಿ ವಾಹನದಲ್ಲಿ ಸ್ಥಳಕ್ಕೆ ಹೋದೆವು. ನಾವು ಹೋಗಿ ನೋಡಿದಾಗ ಮನೆಯು ಕುಸಿದು ಬಿದ್ದಿದ್ದು ಅದರಡಿ ಸಿಲಿಂಡರ್ ಗಳು ಸಿಲುಕಿಕೊಂಡಿದ್ದು, ಅವುಗಳನ್ನು ಹೊರತೆಗೆಯಲಾಯಿತು. ನಮಗೆ ಮನೆಯು ಸಿಲಿಂಡರ್ ಸ್ಫೋಟದಿಂದ ಕುಸಿದು ಬಿದ್ದಿತ್ತು ಎಂದು ತಿಳಿದುಬಂದಿತ್ತು. ಇದರ ಬಗ್ಗೆ ನಾನು ವರದಿಯನ್ನು ನೀಡಿರುತ್ತೇನೆ. ಸಾಕ್ಷಿಯು ನಿಪಿ-10 ರಲ್ಲಿನ ತಮ್ಮ ಸಹಿಯನ್ನು ನೋಡಿ ಗುರುತಿಸಿದ್ದು ಸಾಕ್ಷಿಯ ಸಹಿಯನ್ನು ನಿಪಿ-10(ಬಿ) ಎಂದು ಗುರುತಿಸಲಾಯಿತು. ನಿಪಿ-10 ನ್ನು ನಾವು ಘಟನಾ ಸ್ಥಳಕ್ಕೆ ಹೋದಾಗ ಗ್ರಾಮಸ್ಥರಿಂದ ಕೇಳಿ ಪಡೆದುಕೊಂಡ ಮಾಹಿತಿಯನ್ನು ದಾಖಲಿಸಿಕೊಂಡ ದಾಖಲೆಯಾಗಿರುತ್ತದೆ.

**ಪಾಟೀ ಸವಾಲುಃ ಶ್ರೀ ಜಿ.ಜಿ. ಆರೋಪಿತರ ಪರ ವಕೀಲರಿಂದ**

ನಾವು ಕುಸಿದ ಮನೆಯಡಿ ಸಿಲುಕಿಕೊಂಡಿದ್ದ 4 ಸಿಲಿಂಡರ್ ಗಳನ್ನು ಹೊರತೆಗೆದಿದ್ದವು. ಅದರಲ್ಲಿ 3 ಸಿಲಿಂಡರ್ ಖಾಲಿಯಾಗಿದ್ದವು, 1 ಸಿಲಿಂಡರ್ ಸೋರಿಕೆಯಾಗಿತ್ತು. ಮನೆಯು ಯಾವ

ಕಾರಣಕ್ಕಾಗಿ ಕುಸಿದಿದೆ ಎಂದು ವೈಯಕ್ತಿಕವಾಗಿ ಮಾಹಿತಿ ಇಲ್ಲ ಗ್ರಾಮಸ್ಥರು ಮನೆ ಕುಸಿದಿದ್ದು ಅದರಡಿ ಮನೆಗಳು ಸಿಕ್ಕಿಹಾಕಿಕೊಂಡಿವೆ ಎಂದು ತಿಳಿಸಿದ್ದರು. ಮನೆಯು ಅನಿಲ ಸೋರಿಕೆಯಿಂದ ಕುಸಿದಿರಲಿಲ್ಲ ಎಂದರೆ ಸಾಕ್ಷಿಯು ಅದರ ಬಗ್ಗೆ ನನಗೆ ಮಾಹಿತಿ ಇಲ್ಲ ಎಂದು ನುಡಿಯುತ್ತಾರೆ. ನಾವು ಸ್ಥಳಕ್ಕೆ ಹೋಗಿ ಯಾವುದೇ ಬೆಂಕಿಯನ್ನು ನಂದಿಸಿಲ್ಲ. ನಾವು ಘಟನಾ ಸ್ಥಳಕ್ಕೆ ಹೋದಾಗ ಅಲ್ಲಿ ಬೆಂಕಿಗೆ ಯಾವುದೇ ವಸ್ತುಗಳು ಹಾಗೂ ವ್ಯಕ್ತಿಯಾಗಲೀ ಆಹುತಿ ಆಗಿರಲಿಲ್ಲ. ಕುಸಿದು ಬಿದ್ದ ಮನೆಯು ಮಣ್ಣಿನಿಂದ ನಿರ್ಮಿಸದ್ದ ಮನೆಯಾಗಿತ್ತು ಹಾಗೂ ಅದರ ಮೇಲ್ಛಾವಣಿ ಕಲ್ಲಿನಿಂದ ನಿರ್ಮಿತವಾಗಿತ್ತು. ಸದರಿ ಮೇಲ್ಛಾವಣಿಯು ಕುಸಿದು ಮನೆಯು ಬಿದ್ದು ಹೋಗಿತ್ತು ಎಂದರೆ ಸಾಕ್ಷಿಯು ಇರಬಹುದು ಎಂದು ನುಡಿಯುತ್ತಾರೆ. ನಿಪಿ-10 ನ್ನು ಪೋಲೀಸರ ಮಾತು ಕೇಳಿ ಅವರು ಕೇಳಿದಂತೆ ಕೊಟ್ಟಿರುತ್ತೇನೆ ಎಂದರೆ ಸರಿಯಲ್ಲ.

**<u>ಮರು ವಿಚಾರಣೆಃ</u> ಇಲ್ಲ**
**(ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚುಗಾರರಿಂದ ಕಂಪ್ಯೂಟರನಲ್ಲಿ ಮಾಡಿಸಲಾಯಿತು)**

**ಓ ಹೇ ಕೇ ಸ ಅದೆ**

**ಅಪರ ಸಿವಿಲ್ ನ್ಯಾ. ಮತ್ತು**
**ಜೆ.ಎಂ.ಎಫ್.ಸಿ, ದೊಡ್ಡಬಳ್ಳಾಪುರ**